ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರಿಗೆ ಸೂಚನೆಗಳನ್ನು ನೀಡಲು ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 1992ನೇ ನವೆಂಬರ್ ತಿಂಗಳಿಗೆ ಆಂಥ್ಯವಾದಂತೆ ಚಾಮರಾಜನಗರ ತಾಲ್ಲೂಕಿನಲ್ಲಿ 12769 ಪ್ರಕರಣಗಳಲ್ಲಿ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ 7155 ಫಲಾನುಭವಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಲಾಗಿದೆ. ಫಲಾನುಭವಿಗಳ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಅನರ್ಹ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಿರುವ ಪ್ರಕರಣಗಳನ್ನು ಸಂಬಂಧ ಪಟ್ಟ ತಹಶೀಲ್ದಾರರು ಪತ್ತೆ ಮಾಡಿ ಅಂತಹವುಗಳನ್ನುರದ್ದುಪಡಿಸುವರು. ಈ ಸಂಬಂಧವಾಗಿ ಬಂದು ಅರ್ಜಿಗಳನ್ನು ಪರಿಶೀಲಿಸಲು ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗುವುದು.

ಇ) ಅರ್ಹ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನವನ್ನು ವಿನಾಕಾರಣ ರದ್ದುಪಡಿಸಿರುವ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಸಹಾಯಕ ಆಯುಕ್ತರಿಂದ ತನಿಖೆಯನ್ನು ನಡೆಸಿ ಅರ್ಹರೆಂದು ಕಂಡುಬಂದಲ್ಲಿ ಅವರಿಗೆ ವೃದ್ಧಾಪ್ಯ ವೇತನವನ್ನು ಪುನಃ ನೀಡಲು ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧವಾಗಿ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದರ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದರ ವರದಿಯನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದೆ ಇಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ, ಈ ಪದ್ಧತಿಯನ್ನು ಅನುಸರಿಸುವುದು ಸೂಕ್ತವಾಗಿರಲಾರದು.

ಶಿಕಾರಿಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಒಡೆದ ಕೆರೆಗಳ ಹಾಗೂ ಅದರ ಪರಿಣಾಮ.

233 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ನವೆಂಬರ್ 17,18 ರಂದು ಭಾರಿ ಮಳೆಯಿಂದ ಒಡೆದು ಹೋದ ಕೆರೆಗಳೆಷ್ಟು?

ಆ) ಹಾಗಿದ್ದಲ್ಲಿ, ಕೊಚ್ಚಿಕೊಂಡು ಹೋಗಿರುವ ಪ್ರಮುಖ ರಸ್ತೆಗಳ ಸೇತುವೆಗಳ ಸಂಖ್ಯೆ ಎಷ್ಟು?

ಇ) ಈ ಬಗ್ಗೆ ಸರ್ಕಾರದ ಈವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಪರಿಹಾರ ಕಾರ್ಯಗಳಾವುವು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) 105 ಸಣ್ಣ ನೀರಾವರಿ ಕೆರೆಗಳು ಒಡೆದು ಹೋಗಿರುತ್ತದೆ.

ಆ) ರಸ್ತೆಗಳು 65 (ಸಂಖ್ಯೆ) ಅತ್ಯಧಿಕ

ಸೇತುವೆಗಳು 9 (ಸಂಖ್ಯೆ) ಮಳೆಯಿಂದ ಹಾನಿಗೊಂಡಿದೆ.

ಅಡಿಗಾಲುವೆ.

ಇ) ಜಿಲ್ಲಾಧಿಕಾರಿಯವರು 1992ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಉಂಟಾದ ಹಾನಿಯ ದುರಸ್ತಿ ಸಲುವಾಗಿ ಕೆಳಕಾಣಿಸಿದ ಇಲಾಖೆಗಳಿಗೆ ಹಣವನ್ನು ಈ ತಾಲ್ಲೂಕಿಗೆ ಬಿಡುಗಡೆ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

1) ಜಿಲ್ಲಾ ಪರಿಷತ್ತು	-	2.00
2) ಲೋಕೋಪಯೋಗಿ ಇಲಾಖೆ	-	2.05
3) ಸಣ್ಣ ನೀರಾವರಿ ಇಲಾಖೆ	-	7.00
ಒಟ್ಟು		**11.05 ಲಕ್ಷ**

ತುಮಕೂರು ಜಿಲ್ಲೆಯಲ್ಲಿ ಅಕ್ರಮ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ.

618 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ, ಸದರಿ ಜಮೀನನ್ನು ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಸಕ್ರಮಗೊಳಿಸಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟ ಜನರಿಗೆ ಹಕ್ಕುಪತ್ರ ವಿತರಿಸಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 90,206

ಆ) ಹೌದು. ದಿನಾಂಕ 30 -11-1992ರವರೆಗೆ 2,616 ಅರ್ಜಿಗಳನ್ನು ಸಕ್ರಮಗೊಳಿಸಲಾಗಿದೆ.

ಇ) 195

ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಹೆಚ್ಚು ಅಂಕಗಳು.

224(ಬಿ)-ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಪ್ರತಿ ಶತ 15 ಅಂಕಗಳ ಅಥವಾ 15 ಅಂಕಗಳನ್ನು ಸೇರಿಸಲಾಗುವುದೇ?

ಆ) ಅವುಗಳಲ್ಲಿ ಸರ್ವೇಯರ್ ಹುದ್ದೆಯಲ್ಲಿ ಕಂದಾಯ ಇಲಾಖೆಯಲ್ಲಿ ಯಾವ ರೀತಿ ಸೇರಿಸಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಅಭ್ಯರ್ಥಿಗಳಿಗೆ ಒಟ್ಟು 15 ಅಂಕಗಳನ್ನು ಮಾತ್ರಸೇರಿಸಲಾಗುವುದು.

ಆ) ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಶೇಕಡಾವಾರು ಪಡೆದಿರುವ ಅಂಕಗಳ ಶೇಕಡಾ 80ಅಂಕಗಳನ್ನು ಮತ್ತು ಸಂದರ್ಶನದಲ್ಲಿ ಪಡೆದಿರುವ ಗರಿಷ್ಟ 20 ಅಂಕಗಳವರೆಗೆ ಹಾಗೂ ಗ್ರಾಮಾಂತರ ಅಭ್ಯರ್ಥಿಯಾದಲ್ಲಿ ಅರ್ಹವಿರುವ ಮಾನ್ಯತೆಯ 15 ಅಂಕಗಳನ್ನು ಸೇರಿಸಲಾಗಿದೆ.